ಸಿ.ಸಿ. ನಂ. 594/2014
ಪಿ.ಡಬ್ಲು-4

ಸಾಕ್ಷಿಯನ್ನು ಇಂದು ದಿನಾಂಕ: 12.03.2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ.ಎಸ್.ಹೆಚ್. ವಕೀಲರಿಂದ**

ರಾತ್ರಿ ಹೊಲದಿಂದ ಬಂದಿದ್ದರು ಎಂದು ಹೇಳುತ್ತಿರಲ್ಲ, ಆ ಸಮಯದಲ್ಲಿ ಯಾರ ಹೊಲದಿಂದ ಬಂದರು, ಮತ್ತು ಅಲ್ಲಿ ಏನು ಕೆಲಸ ಇತ್ತು ಎಂಧರೆ ಸಾಕ್ಷಿ ನಮ್ಮ ಹೊಲದಿಂದ ಬಂದಿದ್ದರು ಎಂದು ನುಡಿಯುತ್ತಾರೆ. ನಮ್ಮ ಹೊಲದಲ್ಲಿ ಕಬ್ಬು ಕಟಾವು ಇತ್ತು ಆದಕಾರಣದಿಂದ ಹೋಗಿದ್ದೆನು ಎಂದು ನುಡಿಯುತ್ತಾರೆ. ನನ್ನ ಜಮೀನು ಸ.ನಂ. 171 ಭೂಸನೂರ ಗ್ರಾಮದ್ದು ಇರುತ್ತದೆ. ನಾನು ನನ್ನ ಜಮೀನಿನಿಂದ 9.00-9.30 ಗಂಟೆಗೆ ಖಾನಾವಳಿಗೆ ಬಂದಿರುತ್ತೇನೆ. ನಾವು ಊಟ ಮಾಡುತ್ತಿರುವ ಸಮಯದಲ್ಲಿ ಜಗಳ ನಡೆದಿರುತ್ತದೆ. ಘಟನೆ ನಡೆದಿದೆ ಎಂದು ಹೇಳುವ ಸಮುಯದಲ್ಲಿ ಎಷ್ಟು ಜನರಿದ್ದರು ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ 8-10 ಜನರಿದ್ದರು ಅವರ ಹೆಸರು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಘಟನೆಯು ಅರ್ಧ ಗಂಟೆ ನಡೆದಿರುತ್ತದೆ. ಚಾಸಾ-೧ ರವರಿಗೆ ರಕ್ತಗಾಯವಾಗಿತ್ತು, ಸದರಿ ರಕ್ತ ಬಟ್ಟೆಗೆ ಹತ್ತಿರಲಿಲ್ಲ, ಆದರೆ ಬಟ್ಟೆ ಹರಿದಿತ್ತು. ರಕ್ತ ಬಟ್ಟೆ ಒಳಗೆ ಏನಾದರು ಹತ್ತಿತ್ತಾ ಎಂದರೆ ಸಾಕ್ಷಿ ಬಾವು ಬಂದಿತ್ತು ಎಂದು ನುಡಿಯುತ್ತಾರೆ. ಭುಸನೂರ ಗ್ರಾಮದಲ್ಲಿ ಸರಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ನಿಂಬರ್ಗಾದಲ್ಲಿಯೂ ಸಹ ಕೂಡ ಸರಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಚಾಸಾ-೧ ರವರನ್ನು ಜೀಪ್ ಮೂಲಕ ನಿಂಬರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಜೀಪ ಮೂಲಕ ಕರೆದುಕೊಂಡು ಹೋದೆನು ಎಂದು ಹೇಳುತ್ತಿರಲ್ಲ, ಜೀಪ್ ಯಾರದ್ದು, ಯಾವ

ನಂಬರ್, ಮತ್ತು ಅದರ ಚಾಲಕನ ಹೆಸರು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ಥಾರೆ. ನಿಂಬರ್ಗಾ ಆಸ್ಪತ್ರೆಗೆ ಹೋಗಿದ್ದೆವು ಎಂದು ಹೇಳುತ್ತಿರಲ್ಲ, ಅಲ್ಲಿ ಎಷ್ಟು ಹೊತ್ತಿನವರೆಗೆ ಚಿಕಿತ್ಸೆ ನೀಡಿದರು ಎಂದರೆ ಸಾಕ್ಷಿ ಮೊದಲು ಪೋಲಿಸ್ ಠಾಣೆಗೆ ಹೋದೆವು ನಂತರ ಆಸ್ಪತ್ರೆಗೆ ಹೋದೆವು ಎಂದು ನುಡಿಯುತ್ತಾರೆ. ನಿಂಬರ್ಗಾ ಆಸ್ಪತ್ರೆಗೆ ಪೋಲಿಸರು ಬಂದಿದ್ದರು. ನಿಂಬರ್ಗಾ ಆಸ್ಪತ್ರೆಯಲ್ಲಿ ಎಷ್ಟು ಹೊತ್ತಿನವರೆಗೆ ಚಿಕಿತ್ಸೆ ಪಡೆದುಕೊಂಡಿರಿ ಎಂದರೆ ಸಾಕ್ಷಿ ಹೆಚ್ಚಿನ ಚಿಕಿತ್ಸೆಗೆ ಕಲಬುರಗಿಗೆ ಕಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಿನದಂದು ಘಟನೆಯೇ ಆಗಿರುವುದಿಲ್ಲ, ಆದ್ದರಿಂದ ಚಾಸಾ-೧ ರವರಿಗೆ ಎಷ್ಟು ಗಂಟೆಗೆ ಆಸ್ಪತ್ರೆಗೆ ಕರೆದುಕೊಂಡು ಹೋದೆನು, ಎಷ್ಟು ಗಂಟೆಗೆ ಚಿಕಿತ್ಸೆ ಕೊಡಿಸಿದೆನು ಎಂಧು ಹೇಳಲು ಬರುವುದಿಲ್ಲ ಎಂಧರೆ ಸರಿ ಅಲ್ಲ. ಪೋಲಿಸರು ಚಾಸಾ-೧ ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಪೋಲಿಸರು ನಮ್ಮ ಜೊತೆ ಬಂದಿರಲಿಲ್ಲ. ನಿಂಬರ್ಗಾ ಆಸ್ಪತ್ರೆಯಿಂದ ಕಲಬುರಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಚಾಸಾ-೧ ರವರಿಗೆ ಪ್ರಜ್ಞೆ ಇತ್ತು. ಬೆಳಿಗ್ಗೆ 5.30 ಗಂಟೆಗೆ ಕಲಬುರಗಿ ಬಸವೇಶ್ವರ ಆಸ್ಪತ್ರೆಗೆ ಹೋಗಿರುತ್ತೇವೆ.

ಕಲಬುರಗಿ ಆಸ್ಪತ್ರೆಗೆ ಹೋದಾಗ ನಾನು, ಚಾಸಾ-೧ ಮತ್ತು ಜೀಪಿನ ಚಾಲಕ ಅಷ್ಟೇ ಇದ್ದೆವು ಎಂದು ನುಡಿಯುತ್ತಾರೆ. ಚಾಸಾ-೧ ಸುಮಾರು ಒಂದು ವಾರದವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ, ಆದರೆ ನಾನು ಚಾಸಾ-೧ ರವರನ್ನು ಆಸ್ಪತ್ರೆಗೆ ದಾಖಲಿಸಿ ಅದೇ ದಿನ ಬಂದಿರುತ್ತೇನೆ. ಚಾಸಾ-೧ ರವರನ್ನು ಯಾವ ವಾರ್ಡನಲ್ಲಿ ದಾಖಲಿಸಿರುತ್ತೇನೆ ಎಂದರೆ ಹೇಳಲು ಬರುವುದಿಲ್ಲ. ಚಾಸಾ-೧ ರವರು ದೂರದರ್ಶನದಲ್ಲಿ ಕೆಲಸ ಮಾಡುತ್ತಾರೆ, ಆಸ್ಪತ್ರೆಯವರ ಮೇಲೆ ದಬಾವ ಹಾಕಿ ಖೊಟ್ಟಿ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾರೆ ಎಧಂರೆ ಸರಿ ಅಲ್ಲ. ಚಾಸಾ-೧ ರವರು ಸಕ್ಕರೆ ಕಾರ್ಖಾನೆಯ ಅಧಿಕಾರಿಗಳ ಮೇಲೆ 4-5 ಪ್ರಕರಣಗಳನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಕ್ಕರೆ ಕಾರ್ಖಾನೆ ಅಧಿಕಾರಿಗಳು ಸಹ ಚಾಸಾ-೧ ರವರ ಮೇಲೆ 4-5 ಪ್ರಕರಣಗಳನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಸಾ-೧ ರವರು ಸ್ವಭಾವತಃ ಫಿರ್ಯಾದಿಕೊಡುವವರು ಇರುತ್ತಾರೆ, ಮತ್ತು ಸಕ್ಕರೆ ಕಾರ್ಖಾನೆ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಅವರನ್ನು ಹೆದರಿಸಿ ಅವರಿಂದ ಹಣ ವಸೂಲಿ ಮಾಡಿಕೊಳುತ್ತಾರೆ, ಅದೇ ರೀತಿ ಆರೋಪಿತರು ಸಹ ಸಕ್ಕರೆ ಕಾರ್ಖಾನೆಯ ಕೂಲಿ ಕಾರ್ಮಿಕರು ಇರುತ್ತಾರೆ, ಅವರನ್ನು ಸಹ ಕೂಡ ಹೆದರಿಸಬೇಕೆನ್ನುವ ಉದ್ದೇಶದಿಂದ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಚಾಸಾ-೧ ರವರು ನನ್ನ ಆತ್ಮಿಯ ಸ್ನೇಹಿತನಿದ್ದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಧಂರೆ ಸರಿ ಅಲ್ಲ. ಚಾಸಾ-೧ ರವರು ಪಂಚನಾಮೆ ಕಾಲಕ್ಕೆ ಹರಿದ ಬಟ್ಟೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ.

ನಾನು ನ್ಯಾಯಾಲಯದಲ್ಲಿ ಹೇಳಿದ ಹಾಗೆ ಹೇಳಿಕೆಯನ್ನು ಈ ಮೊದಲು ಎಲ್ಲಿಯೂ ನೀಡಿರುವುದಿಲ್ಲ, ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಹೇಳಿಕೆಯಲ್ಲಿ ಹೇಳಿದ ಸಂಗತಿ ನನಗೆ ಗೊತ್ತಿಲ್ಲ. ಮು.ಮಾ-೧ ರಂತಹ ರಾಡುಗಳು ಸಕ್ಕರೇ ಫ್ಯಾಕ್ಟರಿಯ ಏರಿಯಾದಲ್ಲಿ ಸಾಕಷ್ಟು ಬಿದ್ದಿರುತ್ತವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಘಟನೆ ನಡೆಯದಿದ್ದರೂ, ಚಾಸಾ-೧ ರವರು ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

2014 ನೇ ಇಸವಿಯಲ್ಲಿ ರಾತ್ರಿ 9.30 ಗಂಟೆಗೆ ಚಾಸಾ-1, ನಾನು ಮತ್ತು ಚಾಸಾ-7 ಕೂಡಿಕೊಂಡು ನಮ್ಮ ಹೊಲದಿಂದ ಖಾನಾವಳಿಗೆ ಊಟ ತೆಗೆದುಕೊಂಡು ಹೋಗಲು ಬಂದೆವು, ನಮಗೆ ಊಟ ಕಟ್ಟಿಕೊಡುವಂತೆ ನಾವು ಹೇಳಿದಾಗ ಅವರು ಊಟ ಕಟ್ಟಿಕೊಡುತ್ತೇವೆ ಕುಳಿತುಕೊಳ್ಳಿ ಎಂದು ಹೇಳಿದರು, ನಾವು ಕಟ್ಟೆಯ ಮೇಲೆ ಕುಳಿತುಕೊಂಡೆವು, ಆಗ ಆರೋಪಿಗಳು ಅಲ್ಲಿಗೆ ಬಂದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆಗ ಅವರು ಊಟಕ್ಕೆ ಕುಳಿತರು, ನಮಗೆ ಊಟ ಕೊಡು ಎಂದು ಹೋಟಲನವರಿಗೆ ಕೇಳಿದರು, ಆಗ ಹೋಟಲನವರು ಒಬ್ಬೊಬ್ಬರಿಗೆ ಕೊಡುತ್ತೇನೆ ಎಂದು ಹೇಳಿದಾಗ, ನಮಗೆ ಊಟ ಮೊದಲು ಕೊಡು ಅವರ ಊಟ ಕಟ್ಟಬೇಡ ಎಂದು ವಾದ ವಿವಾದ ನಡೆಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನಾವು ಮೊದಲು ಬಂದಿದ್ದೇವೆ, ನಾವು ತೆಗೆದುಕೊಂಡು ಹೋಗುತ್ತೇವೆ ಎಂದು ಚಾಸಾ-1 ಹೇಳಿದಾಗ, ಆರೋಪಿಗಳು ಆತನಿಗೆ ಅವಾಚ್ಯ ಶಬ್ದಗಳಿಂದ ಬೈದರು, ಬಯ್ಯಬೇಡ ಎಂದಾಗ 2 ನೇ ಆರೋಪಿ ಚಾಸಾ-1 ರವರಿಗೆ ಹೊಡೆದ, 1 ನೇ ಆರೊಪಿ ಚಾಸಾ-1 ರವರಿಗೆ ರಾಡಿನಿಂದ ಭುಜದ ಮೇಲೆ ಹೊಡೆದ, ಮತ್ತು ಕಾಲಿಗೂ ಹೊಡೆದ, ನಾವು ಜಗಳವನ್ನು ಬಿಡಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಚಾಸಾ-1 ಮೂರ್ಛೆ ಹೋಗಿದ್ದ, ನಾವು ಒಂದು ಬಾಡಿಗೆ ಜೀಪಿನಲ್ಲಿ ದೂರು ಕೊಡಲು ನಿಂಬರ್ಗಾಕ್ಕೆ ಹೋದೆವು, ಪೋಲಿಸರು ಚಾಸಾ-1 ರವರನ್ನು ನೋಡಿದರು, ಚಾಸಾ-1 ರವರನ್ನು ಮೊದಲು ಆಸ್ಪತ್ರೆಗೆ ಹೋಗುವಂತೆ ಹೇಳಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಅದರಂತೆ ಕಲಬುರಗಿ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿದೆವು, ಚಾಸಾ-1 ರವರ ತಂದೆಯವರು ಬಂದರು, ನಂತರ ನಾವು ಮನೆಗೆ ಬಂದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ: ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂ ದ